**O.S.No.142/2017 PW.1**

ದಿಃ **15-11-2024** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.**GKG** ವಕೀಲರವರಿಂದಃ</u>

**01.** ದಾವಾ ಆಸ್ತೀಯು ಮೂಲತಹವಾಗಿ ಕೋರಿ ಅಡಿವೆಪ್ಪನ ಮಗ ಸಿದ್ಲಿಂಗಪ್ಪರವರಿಗೆ ಸೇರಿದ್ದು ಎಂದರೆ ಸರಿ. ದಿ.**14-12-1953** ರಲ್ಲಿ ಶ್ರೀ. ಚೆನ್ನವೀರ ಸ್ವಾಮಿಗಳು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಶ್ರೀ ಚೆನ್ನವೀರ ಸ್ವಾಮಿಗಳು ಸಾರ್ವಜನಿಕರ ದುಡ್ಡಿನಿಂದ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಖರೀದಿ ಪತ್ರದಲ್ಲಿ ಶ್ರೀ ಚೆನ್ನವೀರ ಸ್ವಾಮಿಗಳು ಸಾರ್ವಜನಿಕರ ದುಡ್ಡಿನಿಂದ ಖರೀದಿ ಮಾಡಿರುತ್ತಾರೆ ಎಂದು ಬರೆದಿರುವುದು ನನಗೆ ಗೊತ್ತಿರುವುದಿಲ್ಲ. ಚೆನ್ನವೀರ ಸ್ವಾಮಿಗಳು ಮೂಲತಹ ಲಿಂಗನಾಯಕನಹಳ್ಳಿಯವರು. ಚೆನ್ನವೀರ ಸ್ವಾಮಿಗಳು ಪ್ರತಿವಾದಿ **1** ರವರ ತಂದೆ ಚೆನ್ನಬಸವನಗೌಡ ದಿ.**31-03-1986** ನೊಂದಾಯಿತ ದಾನ ಪತ್ರ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಚೆನ್ನವೀರ ಸ್ವಾಮಿಗಳು ಶರಣರಮಠದ ಕಮಿಟಿಯ ಹಾಲಿ ಅಧ್ಯಕ್ಷರಾಧಾಗ **1** ನೇ ಪ್ರತಿವಾದಿಯವರು ತಂದೆಯ ಹೆಸರಿನಲ್ಲಿ ದಾನ ಪತ್ರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅವತ್ತಿನಿಂದ ಅದನ್ನು **1** ನೇ ಪ್ರತಿವಾದಿಯವರು ತಂದೆಯವರು ಅವರು ಮೃತ ಹೊಂದುವ ತನಕ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ದಾನ ಪತ್ರ ನೀಡಿದ ದಿನ ದಾವಾ ಸ್ವತ್ತು ಡೋರ ನಂಬರ **126** ಇರುತ್ತದೆ ಎಂದರೆ ನಾವು ಚಿಕ್ಕವಯಸ್ಸಿನವರು ಆಗಿದ್ದರಿಂದ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತೀಯ ಚೆಕ್ಕಬಂದಿ ಪೂರ್ವಕ್ಕೆ ರಸ್ತೇ ಇರುತ್ತದೆ ಎಂದರೆ ಸರಿ, ಪಶ್ಚಿಮಕ್ಕೆ ಅಳ್ಳಳ್ಳಿ ವೀರಪ್ಪರವರ ಮನೆ ಎಂದರೆ ಸರಿಯಲ್ಲ, ಉತ್ತರಕ್ಕೆ ದಾರಿ ಎಂದರೆ ಸರಿ, ದಕ್ಷಿಣಕ್ಕೆ ಹಾವೇರಿ ಗದಿಗೆಪ್ಪರವರ ಮನೆ ಎಂದರೆ ಸರಿಯಲ್ಲ. ಈ ಚೆಕ್ಕಬಂದಿಯು ದಾನಪತ್ರ ಮಾಡಿದಾಗಿನ ಚೆಕ್ಕಬಂದಿ ಎಂದರೆ ಸರಿಯಲ್ಲ. ದಾವಾ ಆಸ್ತೀಯು ಪೂರ್ವ ಪಶ್ಚಿಮಕ್ಕೆ **23** ಮೊಳ ಮತ್ತು ಉತ್ತರ ದಕ್ಷಿಣಕ್ಕೆ **11** ಮೊಳ ಎಂದರೆ ಸರಿಯಲ್ಲ. ದಾವಾ ಆಸ್ತೀಯು ಪೂರ್ವಕ್ಕೆ ರಸ್ತೇ, ಪಶ್ಚಿಮಕ್ಕೆ ಕಂಚೇವೀರರ ಮನೆ, ಉತ್ತರಕ್ಕೆ ದಾರಿ ಮತ್ತು ದಕ್ಷಿಣಕ್ಕೆ ವೀರಪಜ್ಜನ ಮತ್ತು ಕಂಚೇವೀರರ ಮನೆ

ಇರುತ್ತದೆ. ನಾವು ಯಾವ ಆಧಾರದ ಮೇಲೆ ದಾವಾ ಆಸ್ತೀಯನ್ನು ಸಾರ್ವಜನಿಕ ಸ್ಥಳ ಎಂದು ಘೋಷಣೆ ಮಾಡಲು ಯಾವುದೇ ನೊಂದಾಯಿತ ಟ್ರಸ್ಟನ್ನು ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ಈ ಮಠಕ್ಕೆ ವರ್ಷಕ್ಕೆ ಆಧಾಯ ಬರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಮಠದ ಮಳಿಗೆಗಳು ಮತ್ತು ಬ್ಯಾಂಕಿನಿಂದ ಬರುವ ಆಧಾಯವು **1** ನೇ ಪ್ರತಿವಾದಿಗೆ ಬರುತ್ತದೆ, ಸಾಕ್ಷಿಯು ಮುಂದುವರೆದು ಈಗ ಅಲ್ಲಿ ಬ್ಯಾಂಕ ಇರುವುದಿಲ್. ನಾವು ಚಿಕ್ಕವಯಸ್ಸಿನವರು ಆಗಿದ್ದಾಗ ಅಲ್ಲಿ ಬ್ಯಾಂಕ ಇದ್ದು **10-15** ವರ್ಷಗಳ ಕಾಲ ಅದನ್ನು ನಡೆಸಿರುತ್ತಾರೆ. ಧಾರವಾಡದ ಮೃತ್ಯುಂಜಯ ಸ್ವಾಮಿಗಳ ಸ್ವಾಧೀನದಲ್ಲಿ ಸದರಿ ಬ್ಯಾಂಕ್ ಇತ್ತು. ಅವರೇ ಮಠದ ಹಣವನ್ನು ಕಟ್ಟುವುದು ಮತ್ತು ಬಿಡಿಸಿಕೊಳ್ಳುವುದು ಮಾಡುತ್ತಿದ್ದರು. ಮೃತ್ಯುಂಜಯ ಸ್ವಾಮಿಗಳು ತೀರಿಕೊಂಡು ಸುಮಾರು **10** ರಿಂದ **15** ವರ್ಷ ಆಗಿರುತ್ತದೆ. ಅವರು ತೀರಿಕೊಂಡ ನಂತರ ಆ ಖಾತೆಯು ಅಲ್ಲಿಗೆ ನಿಂತು ಹೋಗಿರುತ್ತದೆ. ದೇವಸ್ಥಾನದ ಮಠವು ಇವತ್ತಿಗೂ ತೆರೆದಿದ್ದು ಬಕ್ತರು ಪೂಜೆ ಸಲ್ಲಿಸಿ ಹೋಗುವುದು ಬರುವುದನ್ನು ಮಾಡುತ್ತಾರೆ ಎಂದರೆ ಸಾಕ್ಷಿಯು ಮಠಕ್ಕೆ ಬೀಗ ಹಾಕಿರುತ್ತಾರೆ ಎಂದು ನುಡಿಯುತ್ತಾರೆ.

**02.** ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳ ಮೇಲೆ ಅಧ್ಯಕ್ಷರು ಯಾರು ಇದ್ದರು ಎಂಬ ಪ್ರಶ್ನೆಗೆ ಸಾಕ್ಷಿಯು ಯಾರು ಅಧ್ಯಕ್ಷರು ಇರುವುದಿಲ್ಲ ಸಾರ್ವಜನಿಕರು ಎಲ್ಲರೂ ಸೇರಿ ಮೀಟಿಂಗ್ ಮಾಡುತ್ತಿದ್ದೇವು ಎಂದು ನುಡಿಯುತ್ತಾರೆ. ಚೆನ್ನವೀರಸ್ವಾಮಿಗಳು **1** ನೇ ಪ್ರತಿವಾದಿಯವರು ತಂದೆಯ ಹೆಸರಿಗೆ ದಾನ ಪತ್ರ ಮಾಡಿದ ನಂತರ ಚೆನ್ನಬಸವನಗೌಡರು ಅಧ್ಯಕ್ಷರು ಮತ್ತು ಹೆಚ್. ಬಸಪ್ಪ ಕಾರ್ಯದರ್ಶಿ ಆಗಿ ನೇಮಕ ಗೊಂಡಿದ್ದರು ಎಂದರೆ ಸರಿಯಲ್ಲ. ನಾನು ಅವರ ಸಮಕ್ಷಮದಲ್ಲಿ ಕೆಲವೊಂದು ತೀರ್ಮಾನ ತೆಗೆದುಕೊಂಡಿರುವ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. **1510** ಎಂಬ ಖಾತೆ ನಂಬರಿಗೆ ದುಡ್ಡನ್ನು ಜಮಾ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಮೃತ್ಯುಂಜಯ ಸ್ವಾಮಿಗಳು ಖಾತೆಯನ್ನು ಹೊಂದಿದ್ದರು ಎಂಬುವುದು ಸುಳ್ಳು, ಚೆನ್ನವೀರಸ್ವಾಮಿಗಳು ಮತ್ತು ಹೆಚ್. ಬಸಪ್ಪ **410** ಎಂಬ ಖಾತೆ ಹೊಂದಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ.

ನೊಂದಾಯಿತ ದಾನ ಪತ್ರವಾದ ನಂತರ ಅವತ್ತಿಗೆ ನಾವು ಸಾರ್ವಜನಿಕರು ಎಲ್ಲಾ ಒಪ್ಪಿ ಅಧ್ಯಕ್ಷರನ್ನಾಗಿ ಕೆ. ಚೆನ್ನಬಸವನಗೌಡರನ್ನು, ಉಪಾಧಕ್ಷರನ್ನಾಗಿ ಕೆ.ಶಿವನಗೌಡ ಕೊಟಿರವರನ್ನು, ಕಾರ್ಯದರ್ಶಿಯಾಗಿ ಬಸಪ್ಪ ಮಾಸ್ತರನ್ನು, ಕೋಶಾಧಿಕಾರಿಯಾಗಿ ಐ.ವೀರಪ್ಪರವರನ್ನು, ನಿರ್ದೇಶಕರನ್ನಾಗಿ ಕೆ.ತೋಟಪ್ಪ ಬಿ.ಪುಟ್ಟಪ್ಪ, ತಂಬೂರಿ ಶೇಖಪ್ಪ, ನಾಗಪ್ಪ ಹ್ಯಾರಡದ, ಜಗದೀಶರವರನ್ನು ನೇಮಕ ಮಾಡಿರುತ್ತೇವೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಸಾರ್ವಜನಿಕರ ಗಮನಕ್ಕೆ ಬರದೇ ಅವರೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವದರಿಂದ ಸಮಯಾವಕಾಶ ನೀಡಿ ಪಾಟೀ ಸವಾಲನ್ನು ಮುಂದುಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

"ನನ್ನ ಸಮಕ್ಷಮ"

ಓ. ಹೇ. ಕೇ. ಸರಿ ಇದೆ

**Sd/-**

(ಶ್ರೀಮತಿ ಅಕ್ಷತಾ ಟಿ.)
ದಿವಾಣಿ ನ್ಯಾಯಾಧೀಶರು,
ಹಡಗಲಿ.